<u>1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>

ಸಿಸಿ ನಂಃ
3599/2012
ಪ್ರಾಸಾ. 1 ಚಾಸಾ.1

ಸಾಕ್ಷಿದಾರರ ಹೆಸರು ಃ ಎಂ ಎಸ್ ರೇಣುಕಾರಾಧ್ಯ
ತಂದೆಯ ಹೆಸರು ಃ ಲೇಟ್ ಎಂ ಶಿವಯ್ಯ
ವಯಸ್ಸು ಃ 68 ವರ್ಷ
ಉದ್ಯೋಗ ಃ ನಿವೃತ್ತ ಸರ್ಕಾರಿ ನೌಕರರು,
ಹಾಲಿ ವಕೀಲರು
ವಾಸ ಃ ಬೆಂಗಳೂರು

<u>ಸಾಕ್ಷಿಯನ್ನು ಕರೆಸಿ ದಿಃ 19.06.2016 ರಂದು ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಆರೋಪಿತರ ಪರಿಚಯ ಇರುತ್ತದೆ. ಸದರಿ ಆರೋಪಿತರು ಸನ್ 2010 ರಲ್ಲಿ ಐಶ್ವರ್ಯ ಎಂಬ ಪ್ರಾಜೆಕ್ಟ್‌ನಲ್ಲಿ ನಿವೇಶನ ಬಡಾವಣೆಗಳನ್ನು ಅಭಿವೃದ್ದಿ ಗೊಳಿಸುತ್ತಿದ್ದು ಮಾರಾಟಕ್ಕೆ ನೀಡುತ್ತೇವೆಂದು ಅವರ ಏಜೆಂಟರ ಮೂಲಕ ನನಗೆ ತಿಳಿಸಿರುತ್ತಾರೆ. 30 X 50 ಕ್ಷೇತ್ರವುಳ್ಳ ಸೈಟಿಗೆ ಮೊದಲು 3ವರೆ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಡಬೇಕು ನಂತರ ಉಳಿಕೆ ಹಣವನ್ನು 6 ತಿಂಗಳ ಒಳಗಾಗಿ ಕೊಡಬೇಕೆಂದು ತಿಳಿಸಿರುತ್ತಾರೆ. ನಾನು ಮೊದಲು ಹಣವನ್ನುಮುಂಗಡವಾಗಿ ಸದರಿ ಪ್ರಾಜೆಕ್ಟ್‌ನಲ್ಲಿ ಹೂಡಿಕೆಮಾಡುವಲ್ಲಿ ಜಾಗವನ್ನು ನೋಡಿಕೊಂಡು ಬಂದಿರುತ್ತೇನೆ. ಸದರಿ ಜಾಗವು ಬಿಡದಿಯಇಟ್ಟುಮಡುಗ್ರಾಮದಲ್ಲಿ ಇರುತ್ತದೆ ನಾನು ಸದರಿ ಜಾಗಕ್ಕೆ ಭೇಟಿ

ಕೊಟ್ಟಿದಾಗ ಅದನ್ನು ಇನ್ನೂಅಭಿವೃದ್ಧಿ ಪಡಿಸಿರಲಿಲ್ಲ. ನಾನು ಚೆಕ್ಕಿನ ಮುಖಾಂತರ 3ವರೆ ಲಕ್ಷ ರೂಪಾಯಿಗಳನ್ನು 1ನೇ ಆರೋಪಿಗೆ ಮುಂಗಡವಾಗಿ ಕೊಟ್ಟಿರುತ್ತೇನೆ. ಸದರಿ ಹಣವನ್ನು ಕೊಟ್ಟಿರುವುದಕ್ಕೆ 1ನೇ ಆರೋಪಿಯು ನನಗೆ ರಸೀದಿಯನ್ನು ಕೊಟ್ಟಿರುತ್ತಾರೆ ಹಾಗೂ ಒಂದು ಕ್ರಯದ ಕರಾರುಪತ್ರವನ್ನು ಕೂಡ ಮಾಡಿಕೊಟ್ಟಿರುತ್ತಾರೆ. ಸದರಿ ಕರಾರುಪತ್ರದಲ್ಲಿ ಸೈಟನ್ನು 6 ತಿಂಗಳ ಒಳಗಾಗಿ ಕೊಡುವುದಾಗಿ ಷರತ್ತನ್ನು ನಮೂದಿಸಲಾಗಿರುತ್ತದೆ. ಆದರೆ, ಆರೋಪಿತರು ಸದರಿ 6 ತಿಂಗಳ ಒಳಗಾಗಿ ಯಾವುದೇ ಸೈಟನ್ನು ನನಗೆ ಕೊಟ್ಟಿರುವುದಿಲ್ಲ. ನಾನು ಮತ್ತೆ ಸದರಿ ಜಾಗಕ್ಕೆ ಹೋಗಿ ನೋಡಿದಾಗ ಸದರಿ ಜಾಗ ಇನ್ನೂ ಅಭಿವೃದ್ಧಿಯಾಗಿರಲಿಲ್ಲ. ನಂತರ ನಾನು ಆರೋಪಿತರನ್ನು ಭೇಟಿಯಾದಾಗ ಅವರು ಸದರಿ ಕರಾರಿನಂತೆ ನಿವೇಶನವನ್ನು ಕೊಡುವುದಾಗಿ ತಿಳಿಸಿರುತ್ತಾರೆ, ಆದರೆ ಕೊಟ್ಟಿರುವುದಿಲ್ಲ ಅದಕ್ಕಾಗಿ ನಾನು ಆರೋಪಿತರಿಗೆ ತಿಳುವಳಿಕೆ ಪತ್ರವನ್ನು ನೀಡಿ ನಾನು ಕೊಟ್ಟಿರುವ ಹಣವನ್ನುವಾಪಸ್ಸು ಕೊಡಬೇಕು ಅಥವಾ ಸೈಟನ್ನು ಕೊಡಬೇಕೆಂದು ಹೇಳಿರುತ್ತೇನೆ, ಆದರೆ, ಆರೋಪಿತರು ನನ್ನ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ನಾನು ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆಯಲ್ಲಿ ಆರೋಪಿತರ ವಿರುದ್ಧ ಒಂದು ದೂರನ್ನು ಸಲ್ಲಿಸಿರುತ್ತೇನೆ ಹಾಗೂ ನಾನು ಮಾನ್ಯ ಗ್ರಾಹಕರ ವೇದಿಕೆಯಲ್ಲಿಯೂಕೂಡ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಮಾನ್ಯ ಗ್ರಾಹಕರ ವೇದಿಕೆಯು ನನ್ನ ಪರವಾಗಿ ಆದೇಶವನ್ನು ಮಾಡಿ ನಾನು ಕೊಟ್ಟಂತಹ ಹಣವನ್ನು ಹಾಗೂ ಅದರ ಜೊತೆ ದಂಡ ಎಂದು 50ಸಾವಿರ ರೂಪಾಯಿ, ಮಾನಸೀಕ ಕ್ಷೋಭೆಗಾಗಿ 5ಸಾವಿರರೂ ಹಾಗೂ ವಾರ್ಷಿಕವಾಗಿ 12ಸಾರವಿರ ರೂ ಬಡ್ಡಿಎಂದು ಕೊಡಬೇಕೆಂದು ಆರೋಪಿತರಿಗೆ ಆದೇಶ ಮಾಡಿರುತ್ತದೆಆದರೆ, ಆರೋಪಿತರು ಸದರಿ ಆದೇಶದ ಪ್ರಕಾರ ನನಗೆ ಯಾವುದೇ ಹಣವನ್ನು ನೀಡಿರುವುದಿಲ್ಲ, ನಂತರ ನಾನು ಸದರಿ ಹಣವನ್ನು ವಸೂಲಿ ಮಾಡಲು ಜಾರಿ

ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಜಾರಿ ಅರ್ಜಿಯಲ್ಲಿ ಆರೋಪಿತರು ಸದರಿ ಆದೇಶದಂತೆ ನನಗೆ ಎಲ್ಲಾ ಹಣ ಪಾವತಿಸಿರುತ್ತಾರೆ. ನನಗೆ ಆರೋಪಿತರಿಂದ ಈಗ ಯಾವುದೇ ಹಣ ಬರಬೇಕಾಗಿಲ್ಲ. ಆರೋಪಿತರು ನನಗೆಕೊಟ್ಟಿರುವ ಮೂಲ ರಸೀದಿ ಹಾಗೂಕರಾರು ಪತ್ರ ಮಾನ್ಯ ಗ್ರಾಹಕರ ವೇದಿಕೆ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಹಾಗೂ ಸಾಕ್ಷಿಯಸಹಿಯನ್ನು ನಿಪಿ-1ಎಎಂದು ಗುರುತಿಸಲಾಯಿತು.

<u>(ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯು ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾರ್ಥಿಸಿಕೊಂಡಿದ್ದು ಅನುಮತಿ ನೀಡಲಾಯಿತು.)</u>

<u>ಪಾಟೀಸವಾಲುಃ ಮಾನ್ಯ ಹಿರಿಯ ಸ.ಸ.ಅ ರವರಿಂದ ಃ</u>

ನಾನು ಸದರಿ ಮುಂಗಡ ಹಣಕ್ಕಾಗಿ ಚೆಕ್ಕುಗಳನ್ನು ದಿನಾಂಕ 07.11.2008 ಹಾಗೂ 08.11.2008 ರಂದು ಆರೋಪಿತರಿಗೆ ಕೊಟ್ಟಿರುತ್ತೇನೆಂದರೆ ಸರಿ. ಅರೋಪಿತರು ನಿವೇಶನದಒಟ್ಟು ಮೌಲ್ಯ 10,80,000-00 ರೂ ಎಂದು ತಿಳಿಸಿರುತ್ತಾರೆಂದರೆಸರಿ. ನನಗೆ ಆರೋಪಿತರು ನಿವೇಶನ ಸಂಖ್ಯೆ 163 ನ್ನು ಅಲಾಟ್ ಮಾಡಿರುತ್ತಾರೆಂದರೆಸರಿ. ಸದರಿ ಪ್ರಾಜೆಕ್ಟ್‌ನ ಹೆಸರು ನ್ಯೂಕೌಂಟಿಯಾಗಿರುತ್ತದೆ ಎಂದರೆಸರಿ. ನಾನು ಸದರಿ ಮುಂಗಡ ಹಣವನ್ನು ಆರೋಪಿತರಿಗೆ ಕೊಡಬೇಕಾದರೆ ಸದರಿ ಜಾಗವು ಆರೋಪಿತರ ಹೆಸರಿನಲ್ಲಿರುತ್ತದೆ ಇಲ್ಲವೋ ಎಂದು ಪರೀಶೀಲನೆ ಮಾಡಿರುವುದಿಲ್ಲ. ಆರೋಪಿತರು ಸದರಿ ಜಾಗವು ತಮ್ಮ ಹೆಸರಿನಲ್ಲಿಅಥವಾ ತಮ್ಮ ಸಂಸ್ಥೆಯಹೆಸರಿನಲ್ಲಿರುತ್ತದೆ ಎಂದು ಹೇಳಿ ನನಗೆ ಯಾವುದೇದಾಖಲಾತಿಯನ್ನು ತೋರಿಸಿರುವುದಿಲ್ಲ. ಸದರಿ ನಿವೇಶನ ಸಂಖ್ಯೆ 163 ಇದೇ ಸರ್ವೆ ನಂ.ನಲ್ಲಿಬರುತ್ತದೆ ಎಂದು ಹೇಳಿ ಯಾವುದೇ ಪ್ರಾಧೀಕಾರದಿಂದ ಅನುಮೋದನೆ ಗೊಂಡ ನಕಾಶೆಯನ್ನು ಆರೋಪಿತರು ನನಗೆತೋರಿಸಿರುವುದಿಲ್ಲ. ನನಗೆ ಸದರಿ ದೂರನ್ನು

ಸಲ್ಲಿಸುವ ಸಂದರ್ಭದಲ್ಲಿ ಆರೋಪಿತರು ನನಗೆ ಮೋಸ ಮಾಡಿರುತ್ತಾರೆಂದು ಅನ್ನಿಸಿದ್ದರ ಮೇರೆಗೆಅವರ ವಿರುದ್ದನಿಪಿ-1ರಂತೆ ದೂರನ್ನು ಸಲ್ಲಿಸಿರುತ್ತೇನೆಂದರೆಸರಿ.

ಪಾಟೀ ಸವಾಲುಃ ಮಾನ್ಯ ಶ್ರೀ ಕೆಎನ್‌ಎಸ್ ಆರೋಪಿತರ ಪರ ವಕೀಲರಿಂದಃ

(ಆರೋಪಿತರ ಪರಮಾನ್ಯವಕೀಲರಾದ ಶ್ರೀ ಕೆಎನ್‌ಎಸ್‌ಇವರು ಸಾಕ್ಷಿಯಪಾಟೀಸವಾಲನ್ನು ಮಾಡಲು ವೇಳೆಯನ್ನು ಕೋರಿದ್ದರಿಂದ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).**

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.